ESI.A.No.3/2016

AW-1,

ದಿನಾಂಕಃ 19-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. ABN ವಕೀಲರಿಂದ

ದಿನಾಂಕಃ16-01-2008 ರಂದು ನಾನು ಇ ಎಸ್ ಐ ಸಂಸ್ಥೆಗೆ ಅರ್ಜಿ ಒಂದನ್ನು ಸಲ್ಲಿಸಿ ನಮ್ಮ ಸಂಸ್ಥೆಯನ್ನು ಇ ಎಸ್ ಐ ಕಾಯಿದೆಯ ವ್ಯಾಪ್ತಿಯೊಳಗೆ ತನ್ನಿ ಎಂದು ಕೇಳಿಕೊಂಡೆ ಎಂದರೆ ನಿಜ. ನಮೂನೆ-01 ರಲ್ಲಿ ನಾನು ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ನಿಜ. 2007 ರ ಡಿಸೆಂಬರ್ ತಿಂಗಳಿನಲ್ಲಿ ನಮ್ಮ ಸಂಸ್ಥೆಯ ಕೆಲಸಗಾರರು 21 ಎಂದು ಅದರಲ್ಲಿ ನಮೂದಿಸಿದ್ದೆ ಎಂದರೆ ನಿಜ. ಆ ರೀತಿ ಅರ್ಜಿ ಕೊಟ್ಟ ನಂತರ ಇ ಎಸ್ ಐ ಸಂಸ್ಥೆಯವರು ನಮ್ಮ ಸಂಸ್ಥೆಗೆ ಭೇಟಿ ಕೊಟ್ಟು, ದಿಃ3-3-2008 ರಂದು ಪರಿಶೀಲನೆ ಮಾಡಿದರು ಎಂದರೆ ನಿಜ.ನಾನು ಅವರಿಗೆ ಅಟೆಂಡೆನ್ಸ ರಿಜಿಸ್ಟರ್ ಮತ್ತು ಪೇಮೆಂಟ್ ರಿಜಿಸ್ಟರಿನ ಪ್ರತಿಗಳನ್ನು ಕೊಟ್ಟೆ ಎಂದರೆ ನಿಜ. ನಾನು ಸಿ ಎಸ್ ಟಿ ರಿಜಿಸ್ಟ್ರೇಷನ್ ಮತ್ತು ಕರ್ನಾಟಕ ಬ್ಯಾಂಕಿನ ಪಾಸ್ ಪುಸ್ತಕದ ಪ್ರತಿಗಳನ್ನು ಅವರಿಗೆ ಕೊಟ್ಟೆ ಎಂದರೆ ನಿಜ. ನಮ್ಮ ಸಂಸ್ಥೆಗೆ ಸಂಬಂಧಿಸಿದ ಬಾಡಿಗೆ ಕರಾರನ್ನು ಅವರಿಗೆ ಕೊಟ್ಟೆ ಎಂದರೆ ನಿಜ. ನಮ್ಮ ಸಂಸ್ಥೆಯನ್ನು ಪ್ರಾವಿಡೆಂಟ್ ಫಂಡ್ ವ್ಯಾಪ್ತಿಯೊಳಗೆ ನೊಂದಾಯಿಸಿಕೊಂಡಿರುವ ಬಗ್ಗೆ ದಾಖಲೆಯನ್ನು ಕೊಟ್ಟೆ. ನಮ್ಮ ದಾಖಲೆಗಳನ್ನು ಪರಿಶೀಲಿಸಿದ ನಂತರ ಇ ಎಸ್ ಐ ಸಂಸ್ಥೆಯವರು ನನಗೆ ಕೋಡ್ ನಂಬರನ್ನು ನೀಡಿದರು ಎಂದರೆ ನಿಜ. ನಂತರ ಡಿಸೆಂಬರ್ 2007 ರಿಂದ ಮಾರ್ಚ-2011 ರವರೆಗೆ ವಂತಿಗೆಯನ್ನು ಕಟ್ಟಿಲ್ಲ ಎಂದು ಕಾರಣ ಕೇಳಿ ನೋಟೀಸನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ತಲುಪಿಲ್ಲ ಎನ್ನುತ್ತಾರೆ. ಅದನ್ನು ನಾನು ಪಡೆದುಕೊಂಡಿದ್ದೇನೆ ಆದರೂ ಅದು ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆನಂತರ ರೂ.2,94,257-00 ಗಳನ್ನು ಕಟ್ಟಬೇಕೆಂದು ಆದೇಶ ಮಾಡಿದರು ಎಂದರೆ ಸಾಕ್ಷಿಯು ನನಗೆ ತಲುಪಿಲ್ಲ ಎನ್ನುತ್ತಾರೆ. ನಾನು ನೊಂದಾಯಿಸಿಕೊಂಡ ಜಾಗದಲ್ಲಿ ಇರಲಿಲ್ಲ ಕೊರೋನಾದಿಂದ ನನಗೆ ತೊಂದರೆ ಆಗಿತ್ತು ಫೋನ್ ಬಂದಾಗಲೇ ನನಗೆ ಗೊತ್ತಾಯಿತು ಆದ್ದರಿಂದ ಈ ಅರ್ಜಿಯನ್ನು ಹಾಕಿದ್ದೇನೆ. 2012 ರಲ್ಲಿ ಆದ ಆದೇಶದ ಮೇಲೆ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ನಿಜ. ಆದರೆ ಅದರ ನಡುವೆ ನಾನು ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ಸ್ಟಾಪೇಜ್ ಮಾಹಿತಿಯನ್ನು ಕೊಟ್ಟಿದ್ದೇನೆ. 2016 ರಲ್ಲಿ ಕೊರೋನಾ ಇರಲಿಲ್ಲ ಎಂಬುದು ನಿಜ. ಆದರೆ ನಾನು ಖಾಲಿ ಮಾಡಿಕೊಂಡು ಹೊರಟುಹೋಗಿದ್ದೆ. ನಿಶಾನೆ ಎ-3 ನ್ನು ಕಾರ್ಮಿಕ ಇಲಾಖೆಗೆ ಕೊಟ್ಟಿದ್ದೇನೆ ಹೊರತು ಇ ಎಸ್ ಐ ಕಾರ್ಪೋರೇಶನ್ ಗೆ ಅಲ್ಲ ಎಂದರೆ ಸಾಕ್ಷಿ ಅದಕ್ಕೂ ಕೊಟ್ಟಿದ್ದೇನೆ ಎನ್ನುತ್ತಾರೆ. 2012 ರಲ್ಲಿ ನನಗೆ ಯಾವುದೇ ವ್ಯವಹಾರ ಇಲ್ಲ ಎಂದು ಇ ಎಸ್ ಐ ಕಾರ್ಪೋರೇಶನ್ ರವರ ಜೊತೆ ಪತ್ರ ವ್ಯವಹಾರ ಮಾಡಿಲ್ಲ ಎಂದರೆ ನಿಜ. 21 ಜನ ಕೆಲಸಗಾರರನ್ನು ನಾನು ನೊಂದಾಯಿಸಿದ ದಾಖಲೆಯಲ್ಲಿ ಮಾತ್ರ ತೋರಿಸಿದ್ದೆ ಆದರೆ ನನಗೆ ಕೆಲಸವೇ ಸಿಗಲಿಲ್ಲ. ನಾನು ಅರ್ಜಿ ಜೊತೆ ಸಿಗ್ಮಾ ಆಲ್ರಿಚ್

ESI.A.No.3/2016

AW-1,

ಕೆಮಿಕಲ್ಸ ಪ್ರೈ ಲಿ., ವರ್ಕ ಆರ್ಡರನ್ನು ಹಾಜರು ಮಾಡಿದ್ದೆ ಎಂದರೆ ನಿಜ. 21 ಜನ ಕೆಲಸಗಾರರು ಇದ್ದರೂ ಕೂಡ ನಾನು ಬ್ಯಾಲೆನ್ಸ ಶೀಟ್ ಮತ್ತು ಪ್ರಾಫಿಟ್ ಅಂಡ್ ಲಾಸ್ ಅಕೌಂಟನ್ನು ಹಾಜರು ಮಾಡಲಿಲ್ಲ ಎಂದರೆ ನಿಜ. ಆದ್ದರಿಂದ ಎದುರುದಾರರು ಮಾಡಿರುವ ಆದೇಶದಂತೆ ಹಣವನ್ನು ಪಾವತಿ ಮಾಡಲು ನಾನು ಬದ್ದನಾಗಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್,
ಇ.ಎಸ್.ಐ.ನ್ಯಾಯಾಲಯ,
ಮೈಸೂರು.